**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.</u>**

**<u>ಸಿ.ಸಿ. ಸಂಖ್ಯೆ:264/2020</u>**

| | |
|---|---|
| ಫ್ರಾಸಾ | 4 |
| ಚಾಸಾ | 4 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.04.2025.

ಸಾಕ್ಷಿಯ ಹೆಸರು : ರಘುನಾಥ್ ರೆಡ್ಡಿ
ತಂದೆಯ ಹೆಸರು : ಚೌಡರೆಡ್ಡಿ
ವಯಸ್ಸು : 50 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಇದ್ದಿಲವಾರಪಲ್ಲಿ

**(2 ಮತ್ತು 3 ಆರೋಪಿತರು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**<u>ಮುಖ್ಯ ವಿಚಾರಣೆ : ಎಪಿಪಿ ರವರಿಂದಃ</u>**

ಈ ಹಂತದಲ್ಲಿ ಸಾಕ್ಷಿಗೆ ನಿಪಿ-2 ರಂತೆ ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಾಕ್ಷಿಯ ಸಹಿಯನ್ನು **ನಿಪಿ-2(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನನಗೆ ಪ್ರಕರಣ ಬಗ್ಗೆ ಏನೂ ಗೊತ್ತಿಲ್ಲ. ನನ್ನ ಸಮಕ್ಷಮ ಯಾರೂ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಹಾಗೂ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ಅನುಮತಿಯನ್ನು ಕೋರಿದ್ದು ನೀಡಲಾಯಿತು**).

**<u>ಪಾಟೀ ಸವಾಲುಃ ಎಪಿಪಿ ರವರಿಂದಃ</u>**

ದಿಃ 20.05.2019 ರಂದು ಫಿರ್ಯಾದುದಾರರು ತೋರಿಸಿದ ಸ್ಥಳದಲ್ಲಿ ಪೋಲಿಸರು ಚಾಸಾ-3 ಹಾಗೂ ನನ್ನ ಸಮಕ್ಷಮ ಮಧ್ಯಾಹ್ನ 1.30 ರಿಂದ 2.15 ಗಂಟೆಯವರೆಗೆ ಪೋಲಿಸರು ಪಂಚನಾಮೆ ನಡೆಸಿ ಸ್ಥಳದಿಂದ ಈಗ ನನಗೆ ತೋರಿಸಿದ ಮಚ್ಚನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ 161(3) ರಂತೆ ಪೊಲೀಸರ ಮುಂದೆ ನೀಡಿದ ಹೇಳಿಕೆಯ ಭಾಗವನ್ನು ಈ ಕೆಳಕಂಡಂತೆ ಓದಿ ಹೇಳಲಾಗಿ, ಸಾಕ್ಷಿಯು ಅದನ್ನು ನಿರಾಕರಿಸಿದರು. ಸದರಿ ಹೇಳಿಕೆಯ ಭಾಗವನ್ನು **ನಿಪಿ-3** ಎಂದು ಗುರುತಿಸಲಾಯಿತು. "ನಾನು ಮೇಲ್ಕಂಡ ವಿಳಾಸದಲ್ಲಿ ...................................................... ಈ ನನ್ನ ಹೇಳಿಕೆಯನ್ನು ನೀಡಿರುತ್ತೇನೆ".

ನಾನು ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು : ಶ್ರೀ ಆರ್.ಜೆ. ವಕೀಲರಿಂದ, ಆರೋಪಿತರ ಪರವಾಗಿಃ</u>**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.